**ಕರ್ನಾಟಕ ಸರ್ಕಾರ**

ಶ್ರೀ ವಿ ಕೆ ನಾಗರಾಜ,
ಜಂಟಿ ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,

ಪದವಿ ಪೂರ್ವ ಶಿಕ್ಷಣ ಭವನ,
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-12. ದಿನಾಂಕ: 01-08-2016.

ಇಮೈಲ್: dpue.buildings@gmail.com ದೂರವಾಣಿ: 080-23561944. ಫ್ಯಾಕ್ಸ್: 23361852.

ಸಂಖ್ಯೆ: ಪಿಯುಇ/ಕಟ್ಟಡ-03/ಇತರೆ-05/ಕಬಾ-01/2016-17. ದಿನಾಂಕ: 01-08-2016.

ಮಾನ್ಯರೆ,

**ವಿಷಯ:** ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡ, ತರಗತಿ ಕೊಠಡಿಗಳು ಮತ್ತು ಪ್ರಯೋಗಾಲಯ ಕೊಠಡಿಗಳ ಸುರಕ್ಷತೆ ಮತ್ತು ಬಾಳಿಕೆಯ ಬಗ್ಗೆ.

**ಉಲ್ಲೇಖ:** ಶ್ರೀ ಕೆ ನಾರಾಯಣ, ಸರ್ಕಾರದ ಅಪರ ಕಾರ್ಯದರ್ಶಿಗಳು (ಆಡಳಿತ), (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ 449 ಎಸ್‌ಹೆಚ್‌ಹೆಚ್ 2016, ದಿನಾಂಕ: 18-07-2016.

* * *

ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ತರಗತಿ ಕೊಠಡಿಗಳನ್ನು ಮತ್ತು ಪ್ರಯೋಗಾಲಯ ಹಾಗೂ ಇತರೆ ಸೌಲಭ್ಯಗಳನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ವಿವಿಧ ಅನುಷ್ಠಾನಾಧಿಕಾರಿಗಳಿಂದ ನಿರ್ಮಿಸಲಾಗುತ್ತಿದೆ. ದಿನಾಂಕ: 11-07-2016ರಂದು ಸರ್ಕಾರಿ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆ, ಯಮಕನಮರಡಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇಲ್ಲಿನ ಕಟ್ಟಡವು ಕುಸಿದು ಎರಡು ಮಕ್ಕಳು ಮರಣ ಹೊಂದಿ 14 ಮಕ್ಕಳು ಗಾಯಗೊಂಡಿರುತ್ತಾರೆ. ಈ ವಿಷಯವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದ್ದು, ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡವನ್ನು ಪರಿಶೀಲಿಸಲು ಮತ್ತು ಹಾಲಿ ಇರುವ ಕಟ್ಟಡಗಳು ತರಗತಿಗಳನ್ನು ನಡೆಸಲು ಸೂಕ್ತವಾಗಿಯೇ ಹಾಗೂ ಬಾಳಿಕೆಯ ಬಗ್ಗೆ ವಸ್ತು-ನಿಷ್ಠ ವರದಿಯನ್ನು ನೀಡಲು ಸೂಚಿಸಿರುತ್ತಾರೆ. ಸದರಿ ವರದಿಯು ಅತ್ಯಂತ ತ್ವರಿತವಾಗಿದ್ದು, ದಿನಾಂಕ: 05-08-2016ರಂದು ಅಂತಿಮ ಗಡುವನ್ನು ನೀಡಿರುತ್ತಾರೆ. ಆದ್ದರಿಂದ ಉಲ್ಲೇಖಿತ ಪತ್ರದ ಪ್ರತಿಯನ್ನು ಈ ಪತ್ರಕ್ಕೆ ಲಗತ್ತಿಸಲಾಗಿದೆ. ಅದರಂತೆ ವಿಷಯವನ್ನು ಆದ್ಯತೆಯ ಮೇರೆಗೆ ಪರಿಗಣಿಸಿ ತಮ್ಮ ವ್ಯಾಪ್ತಿಗೆ ಬರುವ ಕಾಲೇಜುಗಳ ಕಟ್ಟಡಗಳನ್ನು ಪರಿಶೀಲಿಸಿ ಸೂಕ್ತವಾದ ವರದಿಯನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸುವಂತೆ ಈ ಮೂಲಕ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಶ್ರೀ ____________________

ಜಿಲ್ಲಾ ಉಪನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,

____________________ ಜಿಲ್ಲೆ

ಕೆ. ನಾರಾಯಣ
ಸರ್ಕಾರದ ಅಪರ ಕಾರ್ಯದರ್ಶಿ (ಆಡಳಿತ)
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)
ಶಿಕ್ಷಣ ಇಲಾಖೆ

ಕಛೇರಿ : 22253741
22032842
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು – 560 001
E-mail:jsprimary.edukar@gmail.com

ದಿನಾಂಕ: ........................

ಅ.ಸ.ಪ.ಸಂಖ್ಯೆ: ಇಡಿ 449 ಎಸ್‌ಹೆಚ್‌ಹೆಚ್ 2016

18.07.2016

ಮಾನ್ಯರೆ,

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ದಿ:12.07.2016ರ ಟಿಪ್ಪಣಿಯನ್ನು ಇದರೊಂದಿಗೆ ಲಗತ್ತಿಸಿದೆ. ದಿನಾಂಕ:11.07.2016ರಂದು ಸರ್ಕಾರಿ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆ, ಯಮಕನಮರಡಿ ಹುಕ್ಕೇರಿ ತಾಲ್ಲೂಕು, ಇಲ್ಲಿನ ಶಾಲಾ ಕಟ್ಟಡವು ಮಳೆಯಿಂದ ಕುಸಿದು 02 ಮಕ್ಕಳು ಮರಣ ಹೊಂದಿ, 14 ಮಕ್ಕಳು ಗಾಯಗೊಂಡಿರುತ್ತಾರೆ. ಇದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿರುತ್ತದೆ. ರಾಜ್ಯದಲ್ಲಿ ನಡೆಯುತ್ತಿರುವ ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಕಟ್ಟಡಗಳನ್ನು ಪರಿಶೀಲಿಸಿ, ಈ ಕಟ್ಟಡಗಳಲ್ಲಿ ತರಗತಿಗಳನ್ನು ನಡೆಸಲು ಸಾಧ್ಯವಿರುವ ಬಗ್ಗೆ ಮತ್ತು ಬಾಳಿಕೆ ಹಾಗೂ ಸುರಕ್ಷತೆ ಕುರಿತಂತೆ ವಸ್ತು–ನಿಷ್ಠ ವರದಿಯನ್ನು ದಿನಾಂಕ:15.08.2016ರೊಳಗೆ ಮಾನ್ಯ ಸಚಿವರ ಅವಗಾಹನೆಗೆ ಸಲ್ಲಿಸಬೇಕಾಗಿರುವುದರಿಂದ, ರಾಜ್ಯದ ಪದವಿ ಪೂರ್ವ ಕಾಲೇಜುಗಳ ಕಟ್ಟಡಗಳ ಸುರಕ್ಷತೆ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ತಪಾಸಣೆ/ಪರಿಶೀಲನೆ ನಡೆಸಿ, ವಾಸ್ತವ ವರದಿಯನ್ನು ದಿನಾಂಕ:30.07.2016ರೊಳಗೆ ಸಲ್ಲಿಸುವಂತೆ ಕೋರಿದೆ.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ,

18/07/2016

ಡಾ.ರಾಮೇಗೌಡ, ಐ.ಎ.ಎಸ್.
ನಿರ್ದೇಶಕರು,
ಪದವಿಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

As per the order of the director
22/7/16

Dir. 999